**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 224/2019
ಸಿ.ಡಬ್ಲ್ಯೂಃ 11
ಪಿ.ಡಬ್ಲ್ಯೂಃ 12

| | |
|---|---|
| ಸಾಕ್ಷಿದಾರರ ಹೆಸರುಃ | ವಿನೋದ್ |
| ತಂದೆಯ ಹೆಸರುಃ | ವಿಠಲ್ ಕೆ ವಿ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಟ್ರಾವೆಲ್ ಬ್ಯುಸ್ ನೆಸ್ |
| ವಾಸಸ್ಥಳಃ | ತೆಂಕಿಲ ಪುತ್ತೂರು |

ದಿನಾಂಕ 04-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಸೇರಿದ ಕೆಎ-19-ಎಂಪಿ-0007 ಟೋಯೋಟಾ ಕಂಪನಿಯ ಇನ್ನೊವಾ ಕಾರು ಇತ್ತು. ದಿನಾಂಕ 24-09-2017 ರಂದು ನನಗೆ ಸೇರಿದ ಇನ್ನೊವಾ ಕಾರು ಲತೀಫ್ ಎನ್ನುವವರ ಸ್ವಾಧೀನ ಇತ್ತು. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿ ಕಾಣುವ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.27 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು. ನಿ.ಪಿ.27 ಕ್ಕೆ ನಾನು ದಿನಾಂಕ 24-10-2017 ರಂದು ಸಹಿ ಮಾಡಿದ್ದೇನೆ. ನನ್ನ ವಾಹನವನ್ನು ರೀಲೀಸ್ ಮಾಡುವ ಸಮಯ ಆ ದಾಖಲೆಗೆ ನಾನು ಪೊಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ.

2. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.28 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.28(ಎ) ಎಂದು ಗುರುತಿಸಲಾಯಿತು. ನಿ.ಪಿ.28 ಕ್ಕೆ ನಾನು ಅದೇ ದಿನ ಸಂಪ್ಯ ಪೊಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ.

3.ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.29 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.29(ಎ) ಎಂದು

ಗುರುತಿಸಲಾಯಿತು. ನಿ.ಪಿ.29 ಕ್ಕೆ ನಾನು ಕಾರನ್ನು ಬಿಡುಗಡೆ ಮಾಡುವ ಸಮಯ ಸಂಪ್ಯ ಪೊಲೀಸು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾನು ಬಿಡಿಸಿಕೊಂಡ ಕಾರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿ.ಪಿ.7 ರ ಬಾವಚಿತ್ರದಲ್ಲಿರುವ ಕಾರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಭಾಗಶಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 24-10-2017 ರಂದು ಪೊಲೀಸರು ನನ್ನನ್ನು ನಿ.ಪಿ.27 ರಂತೆ ನೋಟೀಸು ಕೊಟ್ಟಿದ್ದಾರೆ ಎಂದರೆ ಸರಿ. ನೋಟೀಸು ಕೊಟ್ಟ ನಂತರ ನಾನು ನಿ.ಪಿ.28 ರಂತೆ ಉತ್ತರ ಕೊಟ್ಟಿದ್ದೇನೆ ಎಂದರೆ ಸರಿ. ನಾನು ಕೊಟ್ಟ ಉತ್ತರದಲ್ಲಿ ದಿನಾಂಕ 24-09-2017 ರಲ್ಲಿ ನನಗೆ ಸೇರಿದ ಇನ್ನೋವಾ ಕಾರು ಮಹಮ್ಮದ್ ಸಫ್ವಾನ್ ಸ್ನೇಹಿತ ಮಹಮ್ಮದ್ ಅರ್ಷಾದ್ ನ ಸ್ವಾಧೀನದಲ್ಲಿ ಇತ್ತು ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ನನಗೆ ಮಹಮ್ಮದ್ ಸಫ್ವಾನ್ ಮತ್ತು ಮಹಮ್ಮದ್ ಅರ್ಷಾದ್ ರವರ ಪರಿಚಯ ಇಲ್ಲ. ನನಗೆ 1 ಮತ್ತು 2ನೇ ಆರೋಪಿಗಳ ಪರಿಚಯ ಇದ್ದರೂ ಕೂಡಾ ಅವರನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಕೆ.ಎ. ವಕೀಲರಿಂದಃ**

ನಿ.ಪಿ.7 ರಲ್ಲಿ ಕಾಣುವ ಕಾರಿನಲ್ಲಿ ನನ್ನ ಕಾರಿನ ನೋಂದಣಿ ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿ. ನೋಂದಣಿ ಸಂಖ್ಯೆ ಕಾಣುತ್ತಿಲ್ಲದ ಕಾರಣ ನಿ.ಪಿ.7 ರಲ್ಲಿ ಕಾಣುವ ಕಾರು ನಿರ್ದಿಷ್ಟವಾಗಿ ನನಗೆ ಸೇರಿದ್ದು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ನನಗೆ ಪೊಲೀಸರು ನೋಟೀಸು ಕೊಟ್ಟಿಲ್ಲ ಮತ್ತು ನಾನು ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ, ನನ್ನ ಸಮಕ್ಷಮ ಮಹಜರು ಮಾಡಿ ಪೊಲೀಸರು ನನಗೆ ಸೇರಿದ ಇನ್ನೋವಾ ಕಾರನ್ನು ನನ್ನ ವಶಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.